
12
ಮಹಾರಾಜ! ಆ ಬ್ರಾಹ್ಮಣ ನಿಮ್ಮ ಅರಮನೆಗೆ ಬೆಂಕಿಯಿಟ್ಟ!
ಸರಿಯಾದ ಸಮಯಕ್ಕೆ ಸೈನಿಕರು ಬೆಂಕಿಯನ್ನು ನಂದಿಸಿದರು.
13
ಪೂಜ್ಯ ಬ್ರಾಹ್ಮಣರೆ! ದಯವಿಟ್ಟು ಈ ಆಹಾರವನ್ನು ಸ್ವೀಕರಿಸಿ. ನೀವು ಹೇಳಿದ ಪ್ರಕಾರವೇ ನಾನು ಅಡುಗೆ ಮಾಡಿ ತಂದಿದ್ದೇನೆ.
ರಾಜ, ಅದನ್ನು ನೀನೇ ಮೊದಲು ಊಟ ಮಾಡಬೇಕು.
14
ಒಂದು ಕ್ಷಣ ಶಿಬಿ ಹಿಂಜರಿದ. ಅವನು ಕಣ್ಣೀರಿಳಿಸುತ್ತಾ ಬ್ರಾಹ್ಮಣನ ಆಣತಿಯಂತೆ ಅದನ್ನು ಊಟ ಮಾಡಲು ಯತ್ನಿಸಿದ.
ನಿಲ್ಲು, ಶಿಬಿ ಮಹಾರಾಜ! ನೀನು ನನ್ನ ಪರೀಕ್ಷೆಯಲ್ಲಿ ಗೆದ್ದೆ. ನಿಜವಾಗಿಯೂ ನೀನು ಸಹನೆಯ ಸಾಕಾರಮೂರ್ತಿಯಾಗಿರುವೆ. ನಿನಗೆ ದೀರ್ಘಾಯುವಾಗಲಿ ಎಂದು ನಾನು ಆಶೀರ್ವದಿಸುತ್ತೇನೆ. ನಿನ್ನ ಮಗನೂ ಜೀವಂತವಾಗುವನು.
15
ಆ ಬ್ರಾಹ್ಮಣ ಮಾಯವಾದ. ಸಾಕ್ಷಾತ್ ಶಿವನೇ ಬ್ರಾಹ್ಮಣನ ರೂಪದಲ್ಲಿ ಬಂದಿದ್ದ. ಅವನು ಶಿಬಿಯ ಮುಂದೆ ಪ್ರತ್ಯಕ್ಷನಾದ. ರಾಜಕುಮಾರನು ಜೀವಂತನಾಗಿ ಮರಳಿದ್ದನ್ನು ಕಂಡ ಜನರೆಲ್ಲ ಶಿಬಿಯ ಗುಣಗಾನ ಮಾಡಿದರು.
ಓ ಮಹಾರಾಜ! ಒಬ್ಬ ಸಾಧುವಿನ ಸತ್ಕಾರ ಮಾಡಲು ನೀನು ನಿನ್ನ ಮಗನನ್ನೇ ಅಡುಗೆ ಮಾಡಿದೆ!
ನಾನು ಲಾಭ, ಕೀರ್ತಿಗಳಿಗೋಸ್ಕರ ಸಾಧುಸೇವೆ ಮಾಡುವುದಿಲ್ಲ. ಅವರ ಬಯಕೆಯೇನೋ ಅದನ್ನೇ ಮಾಡುತ್ತೇನೆ.
16
ಓ ರಾಜರುಗಳೇ! ನಿಮ್ಮ ನಡುವೆ ಯಾರು ಶ್ರೇಷ್ಠರೆಂದು ನಿಮಗೆ ಈಗ ಅರ್ಥವಾಯಿತೆ? ಶಿಬಿಯೇ ನಮ್ಮಲ್ಲಿ ಶ್ರೇಷ್ಠನಾದವನು. ಶಿಬಿ ಚಿರಕಾಲ ಬಾಳಲಿ!